

# ‘ನಾದ ಚಿಂತಾಮಣಿ’



ವಿದ್ವಾನ್ ವೆಂಕಟ ಗಿರಿಯಪ್ಪ

**ಕರ್ನಾಟಕ ಶಾಸ್ತ್ರೀಯ ಶೈಲಿಯ ಪಿಟೀಲು ವಾದನದಲ್ಲಿ ಸಾಕಷ್ಟು ಹೆಸರು ಮಾಡಿ, ವಾದನ ನಿಪುಣ, ನಾದ ಚಿಂತಾಮಣಿ, ಕರ್ನಾಟಕ ಕಲಾಶ್ರೀ ಮುಂತಾದ ಬಿರುದು, ಪ್ರಶಸ್ತಿಗಳಿಗೆ ಭಾಜನರಾದವರು ಹಿರಿಯ ಪಿಟೀಲು ವಾದಕ ವಿದ್ವಾನ್ ವೆಂಕಟ ಗಿರಿಯಪ್ಪ. ಸುಮಾರು ಏಳು ದಶಕಗಳ ಕಾಲ ಪಿಟೀಲು ತನಿಯ ಮೂಲಕ ಕೇಳುಗರ ಮನಗೆದ್ದ ಈ ತಂತಿ ವಾದ್ಯ ಪ್ರವೀಣ ಇನ್ನು ನೆನಪು ಮಾತ್ರ.**

**■ ಉಮಾ ವೇಣೂರು**

ಅದು ಶೃಂಗೇರಿ ಶಾರದಾ ಪೀಠದಲ್ಲಿ ನಡೆದ ಸಂಗೀತ ಕಛೇರಿ. ಸುಮಾರು 80ರ ಆಸುಪಾಸು ವಯಸ್ಸಿನ ಪಿಟೀಲು ವಾದಕರೊಬ್ಬರು ಪಕ್ಕವಾದ್ಯ ಕಲಾವಿದರ ಜಾಗದಲ್ಲಿ ಕುಳಿತರು. ವೇದಿಕೆಯಲ್ಲಿ ಗಾಯಕರು ಮೇಳಕರ್ತ ರಾಗ ಮಾಯಾಮಾಳವಗೌಳ ಆಲಾಪ ಆರಂಭಿಸುತ್ತಿದ್ದಂತೆ ಈ ಹಿರಿಯಜ್ಜನ ಪಿಟೀಲಿನ ಕಮಾನಿನಲ್ಲಿ ಎಳೆಎಳೆಯಾಗಿ ಮಾರ್ದನಿಸಿದ ಸ್ವರಗಳು ಕೇಳುಗರನ್ನು ಸೂಜಿಗಲ್ಲಿನಂತೆ ಸೆಳೆಯಿತು. ಸರಸ್ವತಿಯ ಮುಂದೆ ಇವರ ತಂತಿಯಿಂದ ಹೊಮ್ಮಿದ ‘ಸ್ವರ ಸರಸ್ವತಿ’ ಅಂದಿನ ಕಛೇರಿ ಕಳೆಕಟ್ಟಲು ಕಾರಣವಾಯಿತು.

ಸುಮಾರು ಏಳು ದಶಕಗಳ ಕಾಲ ಪಿಟೀಲು ತನಿಯ ಮೂಲಕ ಕೇಳುಗರನ್ನು ಸೆಳೆದ ಹಿರಿಯ ಪಿಟೀಲು ವಾದಕ ವಿದ್ವಾನ್ ವೆಂಕಟಗಿರಿಯಪ್ಪ ಗಾಯನದಷ್ಟೇ ವಾದನಕ್ಕೂ ಸಂಗೀತದಲ್ಲಿ ಮಹತ್ವ ಇದೆ ಎಂಬುದನ್ನು ಸಾಬೀತುಪಡಿಸಿದವರು.

ಕರ್ನಾಟಕ ಶಾಸ್ತ್ರೀಯ ಸಂಗೀತ ಶೈಲಿಯ ಪಿಟೀಲು ವಾದನದಲ್ಲಿ ವಿದ್ವಾನ್ ವೆಂಕಟಗಿರಿಯಪ್ಪ ನಿಷ್ಣಾತರ ಸಾಲಿಗೆ ನಿಲ್ಲುವವರು. ತಂದೆ ಸಿ. ಮುನಿಯಪ್ಪ ಭಜನೆ, ಕೀರ್ತನೆಗಳನ್ನು ಹಾಡುತ್ತಿದ್ದವರು. ಮೂಲತಃ ಬೆಂಗಳೂರಿನವರಾದ ಇವರಿಗೆ ಮನೆಯಲ್ಲೇ ಸಂಗೀತದ ವಾತಾವರಣ ಇದ್ದ ಕಾರಣ ಸುಲಭವಾಗಿ ಸಂಗೀತ ಒಲಿಯಿತು. ಸಂಗೀತ ಅಭ್ಯಾಸವನ್ನು ಶಾಸ್ತ್ರೀಯ ಮತ್ತು ಶಿಸ್ತುಬದ್ಧವಾಗಿ ತಮ್ಮ ಸೋದರಮಾವ ನಂಜುಂಡಯ್ಯ ಅವರ ಬಳಿ ಆರಂಭಿಸಿದರು. ಬಳಿಕ ಮುನಿಸ್ವಾಮಿ ಶೆಟ್ಟಿ, ವಿದ್ವಾನ್ ಪಿ. ಭುವನೇಶ್ವರಯ್ಯ ಅವರ ಬಳಿ ಪಿಟೀಲು ಅಭ್ಯಾಸ ಮಾಡಿ ಉತ್ತಮ ಕಲಾವಿದರಾಗಿ ರೂಪುಗೊಂಡರು.

ವಿಶೇಷವಾಗಿ ಪಕ್ಕವಾದ್ಯದಲ್ಲಿ ಹೆಸರು ಮಾಡಿರುವ ವೆಂಕಟಗಿರಿಯಪ್ಪ ಅವರು, ಹಿರಿಯ ಸಂಗೀತಗಾರರಾದ ಟಿ.ಆರ್. ಮಹಾಲಿಂಗಂ, ಚಿಂತನಪಲ್ಲಿ ರಾಮಚಂದ್ರರಾಯರು, ಪಲ್ಲವಿ ಚಂದ್ರಪ್ಪ, ಪಿ. ಭುವನೇಶ್ವರಯ್ಯ, ಹೊನ್ನಪ್ಪ ಭಾಗವತರ್, ದೇಶಿಕಾಚಾರ್ ಮುಂತಾದವರ ಸಂಗೀತಕ್ಕೆ ಪಿಟೀಲು ಪಕ್ಕವಾದ್ಯ ನುಡಿಸಿ ಹೆಸರಾದವರು. ನೃತ್ಯ ಪಟುಗಳಾದ ಕೃಷ್ಣರಾವ್, ಉಷಾ ದಾತಾರ್ ಅವರ ನೃತ್ಯಗಳಿಗೂ ಪಿಟೀಲು ನುಡಿಸಿದ ಹೆಗ್ಗಳಿಕೆ ಇವರ ಬೆನ್ನಿಗಿದೆ. ಕಳೆದ 70 ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿರುವ ಅಪರೂಪದ ವಾದ್ಯ ಪ್ರವೀಣ ವಿದ್ವಾನ್ ವೆಂಕಟಗಿರಿಯಪ್ಪ ಅವರು.



ವಿದ್ವಾನ್ ವೆಂಕಟ ಗಿರಿಯಪ್ಪ ಅವರಿಗೆ ಕರ್ನಾಟಕ ಕಲಾಶ್ರೀ ಪ್ರಶಸ್ತಿ ನೀಡುತ್ತಿರುವ ವಿದುಷಿ ಶ್ಯಾಮಲಾ ಭಾವೆ

ತಮ್ಮ 80ರ ಹರೆಯದಲ್ಲೂ ಕರ್ನಾಟಕ ಸಂಗೀತ ಹಾಡುಗಾರಿಕೆಯನ್ನು ಹೇಳಿಕೊಡುತ್ತಿದ್ದ ವೆಂಕಟಗಿರಿಯಪ್ಪ ಅವರು ಅನೇಕ ಶಿಷ್ಯಂದಿರನ್ನೂ ತಯಾರು ಮಾಡಿದ್ದಾರೆ. ಸಿ. ರಾಮದಾಸ, ಕಾಂಭೋಜಿ, ಎಂ.ಆನಂದ, ಕಾಶೀನಾಥ ಮುಂತಾದವರು ಇದೀಗ ಸಂಗೀತದಲ್ಲಿ ಉನ್ನತ ಸಾಧನೆ ಮಾಡಿ ಗುರುವಿಗೆ ತಕ್ಕ ಶಿಷ್ಯರಾಗಿ ರೂಪುಗೊಂಡಿದ್ದಾರೆ.

’ಪಾಶ್ಚಾತ್ಯ ಸಂಗೀತ, ಸಿನಿಮಾ ಸಂಗೀತದಂತಹ ಅಬ್ಬರದ ಸಂಗೀತದ ಮಧ್ಯೆ ಕರ್ನಾಟಕ ಸಂಗೀತ ನಲುಗುತ್ತಿದೆ ಎನ್ನುವ ಕೊರಗು ಅವರದಾಗಿತ್ತು. ಹಿಂದೆಲ್ಲ ಮದುವೆ ಮನೆಗಳಲ್ಲಿಯೂ ಶಾಸ್ತ್ರೀಯ ಸಂಗೀತ ನಡೆಯುತ್ತಿತ್ತು. ಆದರೆ ಈಗ ಅದು ಬರೀ ಶೋಕಿಗಾಗಿ ನಡೆಯುತ್ತಿದೆ ಎಂದೂ ಅವರು ಬೇಸರ ವ್ಯಕ್ತಪಡಿಸುತ್ತಿದ್ದರು.

ಆಕಾಶವಾಣಿ ಕಲಾವಿದರಾಗಿದ್ದ ವೆಂಕಟಗಿರಿಯಪ್ಪ ಅವರಿಗೆ ಹಲವಾರು ಪ್ರಶಸ್ತಿ, ಬಿರುದುಗಳೂ ಬಂದಿವೆ. ಸೋಸಲೆ ವಾದಿರಾಜ ಮಠದಿಂದ ‘ವಾದನ ಕಲಾ ನಿಪುಣ’ , ಚಿಂತಾಮಣಿ ಗಾಯನ ಸಮಾಜ ‘ನಾದ ಚಿಂತಾಮಣಿ’ ಬಿರುದು ನೀಡಿ ಗೌರವಿಸಿದೆ. ಬೆಂಗಳೂರು ಗಾಯನ ಸಮಾಜದ 32 ನೇ ಸಂಗೀತ ಸಮ್ಮೇಳನದಲ್ಲಿ ‘ವರ್ಷದ ಕಲಾವಿದ’ ಎಂದು ಸನ್ಮಾನಿತರಾಗಿದ್ದಾರೆ. ಪ್ರತಿಷ್ಠಿತ ‘ಕರ್ನಾಟಕ ಕಲಾಶ್ರೀ’ ಪ್ರಶಸ್ತಿಯೂ ಇವರಿಗೆ ಒಲಿದಿದೆ. ಇವರ ನಾಲ್ಕು ಮಕ್ಕಳೂ ಸಂಗೀತದಲ್ಲಿ ಸಾಧನೆ ಮಾಡಿದ್ದು ಈಗಾಗಲೇ ಹಲವಾರು ವೇದಿಕೆಗಳಲ್ಲಿ ತಮ್ಮ ಪ್ರತಿಭೆ ಮೆರೆದಿದ್ದಾರೆ.

ಹಾಗೆ ನೋಡಿದರೆ ವೆಂಕಟಗಿರಿಯಪ್ಪ ಅವರು ಓದಿದ್ದು ಬರೀ ಎಂಟನೇ ತರಗತಿ. ಮುಂದೆ ಓದಲಾಗದಿದ್ದರೂ ಸಂಗೀತವನ್ನು ಒಲಿಸಿಕೊಂಡರು. ಪಿಟೀಲನ್ನು ಕೈಗೆತ್ತಿಕೊಂಡರು. ಆಮೇಲೆ ಇದೇ ವಾದ್ಯ ಅವರ ಕೈಹಿಡಿಯಿತು.

ಮೈಸೂರು, ಕೋಲಾರ, ಬಳ್ಳಾರಿ, ರಾಯಚೂರು, ಶಿವಮೊಗ್ಗ, ಚಿಕ್ಕಬಳ್ಳಾಪುರ, ತುಮಕೂರು, ಶೃಂಗೇರಿ, ಧರ್ಮಸ್ಥಳ, ನಂಜನಗೂಡು, ಮೇಲುಕೋಟೆ, ತಿರುಪತಿ ಮುಂತಾದ ಕಡೆಗಳಲ್ಲಿ ಇವರ ಪಿಟೀಲು ನಾದ ಅನುರಣಿಸಿದೆ. ರಾಜ್ಯದಿಂದ ಆಚೆಗೂ ಇವರ ಪಿಟೀಲಿನ ಸ್ವರಮಾಲೆ ಸಹೃದಯರ ಮನಮುಟ್ಟಿದೆ. ತಮಿಳುನಾಡು, ಆಂಧ್ರಪ್ರದೇಶ, ಚೆನ್ನೈ, ಕೇರಳ, ದೆಹಲಿ, ಮುಂಬಯಿ, ಕೋಲ್ಕತ್ತಾಗಳಲ್ಲೂ ಪಿಟೀಲು ನುಡಿಸಿದ್ದಾರೆ. ಸಾಗರದಾಚೆಗೂ ಇವರ ಪಿಟೀಲು ವಾದನ ಕೇಳುಗರನ್ನು ಸೆಳೆದಿದೆ. ಸಿಂಗಪುರ, ಮಲೇಶಿಯಾ, ಹಾಂಕಾಂಗ್, ಕೌಲಲಾಂಪುರ, ಪ್ಯಾರಿಸ್‌ಗಳಲ್ಲಿ ಇವರ ಪಿಟೀಲು ತನಿ ಅನುರಣಿಸಿದೆ.

ಈಚೆಗೆ ವಿದ್ವಾನ್ ವೆಂಕಟಗಿರಿಯಪ್ಪ ಅವರು ಸಂಗೀತ ಪ್ರಪಂಚದ ಅಪಾರ ಅಭಿಮಾನಿಗಳನ್ನು ಬಿಟ್ಟು ಹೋಗಿದ್ದು ಅವರಿನ್ನು ನೆನಪು ಮಾತ್ರ. ■